ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 138-142
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಪ್ರೊ. ಪದ್ಮಾ ಶೇಖರ್ ಅವರ ಹಕ್ಕಿಯ ಹರೆಯ ಕಾವ್ಯದ ಪ್ರತಿಮಾಲೋಕ

**ಸುರೇಶ ಟಿ. ಹೆಚ್**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ.

**Abstract:**
*ಕವಿ ದ.ರಾ. ಬೇಂದ್ರೆಯವರು ಹಕ್ಕಿ ಹಾರುತಿದೆ ನೋಡಿದಿರ ಎನ್ನುವ ಕವಿತೆಯನ್ನು ಬರೆದರು. ಇದರಲ್ಲಿ ಬರುವ ಹಕ್ಕಿ ಎನ್ನುವ ಪ್ರತಿಮೆಯು ಕಾಲದ ಅನಂತ ಪ್ರತಿಮೆಯಾಗುವುದನ್ನು ವಿಮರ್ಶೆಯು ಗುರುತಿಸಿದೆ. ಬಿ.ಎಂ.ಶ್ರೀಯವರು ಇಂಗ್ಲಿಷ್ ಗೀತೆಗಳು ಕೃತಿಯಲ್ಲಿ ಆಂಗ್ಲ ಕವಿ ಪಿ.ಬಿ. ಶೆಲ್ಲಿಯ ಸ್ಕೈಲಾರ್ಕ್ ಕವಿತೆಯನ್ನು "ಆರು ನೀನೆಲೆ ಹರುಷ ಮೂರುತಿ ಹಕ್ಕಿ ಎಂಬರೆ ನಿನ್ನನು" ಆರಂಭವಾಗುವಂತೆ ಅನುವಾದಿಸಿದ್ದಾರೆ. ಇಲ್ಲಿ ಹಕ್ಕಿ ಚೈತನ್ಯದ ಪ್ರತೀಕವಾಗಿ ಕಾಣುತ್ತದೆ. ಇದೇ ರೀತಿ ಹಕ್ಕಿಯನ್ನು ಪ್ರತಿಮೆಯಾಗಿಸಿಕೊಂಡು ಪ್ರೊ. ಪದ್ಮಾಶೇಖರ್ ಅವರು ಹಕ್ಕಿಯ ಹರೆಯ ಎನ್ನುವ ಕವನ ಸಂಕಲನವನ್ನು 1989ರಲ್ಲಿ ಪ್ರಕಟಿಸಿದ್ದಾರೆ.*

**Keywords:** *ಕನ್ನಡ ಸಾಹಿತ್ಯ, ಕವನ ಸಂಕಲನ, ಪದ್ಮಾ ಶೇಖರ್, ಹಕ್ಕಿಯ ಹರೆಯ.*

## ಪೀಠಿಕೆ

ಮನುಷ್ಯನ ಬದುಕು ಸುಖದ ಸುಪ್ಪತ್ತಿಗೆಯಲ್ಲ, ಹಾಗೆಂದು ದುಃಖದ ಮಡುವಲ್ಲ. ಎರಡರ ಸಮಾನತೆಯಾಗಿ ಜೀವನ ಸಾಗುತ್ತದೆ. ಇದನ್ನು ಹಕ್ಕಿಯ ಹರೆಯ ಕವನ ಸಂಕಲನದ ಸುಖದ ಯಾನ ಕವಿತೆಯು ಧ್ವನಿಸುತ್ತದೆ. ಇದರಲ್ಲಿ ಯಾನದ ಪ್ರತಿಮೆಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ.

***ಚೆಲ್ಲಿಬಿಡು ಜನಕೂ ರುಚಿಯ ನೋಡಲು***
***ಬದುಕ ಒಡಕು ನಾವೆಯಲಿ***
***ಇದೆಲ್ಲ ಸಹಜ.***

ಕವಿತೆಯ ಸೂಕ್ಷ್ಮಗ್ರಾಹಿತ್ವವೆಂದರೆ ಬದುಕು ಒಡಕು ನಾವೆಯಲ್ಲಿ ಯಾನ. ಮನುಷ್ಯ ದೋಣಿಯಲ್ಲಿ ಪ್ರಯಾಣಿಸುವ ಸಂದರ್ಭವೂ ಬರಬಹುದು. ದೋಣಿಯ ಪಯಣವೆಂದರೆ ಅದು ನದಿ ಅಥವಾ ಸಮುದ್ರದಲ್ಲಿ ಆಗಬಹುದು. ಈ ದೋಣಿಯು ಯಾವುದೇ ಸಮಯದಲ್ಲಿ ತೂತಾಗಬಹುದು. ಇಲ್ಲಿ ಕವಯಿತ್ರಿ ಒಡಕು ಎನ್ನುವುದನ್ನು ಎರಡು ಅರ್ಥದಲ್ಲಿ ಹೇಳುತ್ತಿದ್ದಾರೆ. ದೋಣಿಯು ಒಡಕು ಒಂದು ಅರ್ಥವಾದರೆ ಮನುಷ್ಯ ಸಂಬಂಧದಲ್ಲಿ ಉಂಟಾಗಬಹುದಾದ ಬಿರುಕು ಎನ್ನುವ ಅರ್ಥವನ್ನು ಸಹ ಇದು ಕೊಡುತ್ತದೆ.

***ಚಿಲಿಪಿಲಿಗುಟ್ಟುವ ಹಕ್ಕಿಗಳ***
***ಸ್ವಚ್ಛಂದ ಹಾರಾಟದಂತೆ***

ಹಾರಾಟವು ಕೂಡ ಯಾನ ಪ್ರತಿಮೆಯಾಗುತ್ತದೆ. ಕನ್ನಡದ ಕವಿಗಳೆಲ್ಲರೂ ಮೌನವನ್ನು ಅದ್ಭುತವೆಂದರೆ ಈ ಕವಿತೆ ಮೌನದೊಳಗಿನ ಏಕತಾನತೆಯನ್ನು ಒಡೆಯುತ್ತದೆ. ಬದುಕಿನ ಸುಖದ ಯಾನ ಮಾತಿನಿಂದ ಆಗುತ್ತದೆ ಮೌನದಿಂದ ಅಲ್ಲ ಎನ್ನುವುದನ್ನು ಕವಿತೆ ಧ್ವನಿಸುತ್ತದೆ. ಬದುಕು

**Please cite this article as:** ಸುರೇಶ ಟಿ. ಹೆಚ್. (2025). ಪ್ರೊ. ಪದ್ಮಾ ಶೇಖರ್ ಅವರ ಹಕ್ಕಿಯ ಹರೆಯ ಕಾವ್ಯದ ಪ್ರತಿಮಾಲೋಕ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(6), 138–142

ಯಾಂತ್ರಿಕವಾದುದಲ್ಲ. ಹಾಗೆಂದು ಭಾವುಕವಾದುದಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಬದುಕಿಗೆ ಅತಿಥಿ. ಅತಿಥಿಯಾದವನು ಇರುವಷ್ಟು ದಿನ ಸಂತೋಷವಾಗಿರಬೇಕು ಎನ್ನುವುದು ಕವಿತೆಯ ಕಾಳಜಿ.

ವ್ಯವಸ್ಥೆ ಎನ್ನುವ ಕವಿತೆಯಲ್ಲಿ ಬಂಡಾಯದ ಧೋರಣೆ ಇದೆ. ಪದ್ಮಾಶೇಖರ್ ಅವರು ಕವಿತೆಯನ್ನು ಬರೆದ ಸಂದರ್ಭವು ಕೂಡ ಕನ್ನಡದ ಬಂಡಾಯ ಕಾಲಘಟ್ಟವು ಏರುಗತಿಯಲ್ಲಿ ಇದ್ದಂತ ಹೊತ್ತು. ಇದರ ಪ್ರಭಾವ ಇಲ್ಲಿ ಕಾಣುತ್ತದೆ. ಇಲ್ಲಿ ಕಾಲದ ಪ್ರತಿಮೆಯು ಇದೆ. ಎಲ್ಲೊ ಹುಟ್ಟಿ ಎಲ್ಲೊ ಬೆಳೆದು– ಎನ್ನುವಲ್ಲಿ ಹುಟ್ಟು ಮತ್ತು ಬೆಳವಣಿಗೆಗಳು ಕಾಲವನ್ನು ಸೂಚಿಸುತ್ತವೆ

*ಜಾತಿ ಮತಗಳ ಭದ್ರಬೇಲಿಯಲಿ*
*ಮಾನವೀಯತೆ ಸುಲಿವ*
*ಶ್ರೀಮಂತರಿಗಿದು*
*ಫಲವತ್ತಾದ ಹಸಿರುಭೂಮಿ*

ಮಾನವರನ್ನು ಸುಲಿವ ಎನ್ನುವ ವಾಕ್ಯ ಇಲ್ಲಿ ಬಂದಿದ್ದರೆ ಅದು ವಾಚ್ಯಾರ್ಥವನ್ನು ನೀಡುತ್ತಿತ್ತು. ಇಲ್ಲಿ ಮಾನವೀಯತೆನ್ನು ಸುಲಿವ ಎನ್ನುವಾಗ ಅದು ವ್ಯಂಗ್ಯಾರ್ಥವನ್ನು ನೀಡಿ ಕಾವ್ಯದ ಬಂಡಾಯ ಧೋರಣೆಯನ್ನು ಮತ್ತಷ್ಟು ಗಟ್ಟಿಯಾಗಿಸುತ್ತದೆ. ಮಾನವೀತೆಯನ್ನು ಸುಲಿದು ಹಾಕಿದರೆ ಉಳಿದವು ಗೌಣವಾಗುತ್ತವೆ ಆಗ ಹಿಂಸೆ ಕ್ರೂರತ್ವವನ್ನು ದಾರಿಯಾಗಿಸಿಕೊಂಡವರು ವಿಜೃಂಭಿಸುವಂತಾಗುತ್ತದೆ ಎಂದು ಕವಿತೆ ಹೇಳುತ್ತದೆ.

*ಪರಂಪರೆಯ ಕೆಸರಲ್ಲಿ*
*ಕಲ್ಲಕಣವಾಗಿ*
*ತೃಣವೆನಿಸಿ*
*ನಿಧಾನವಾಗಿ*
*ಕೊರಗಿ ಕೃಶವಾಗುತ್ತ*
*ವಾಸ್ತವತೆಯ ಗಿರಣಿಯಲ್ಲಿ*
*ಮೈಮನವ ಸುಲಿಸಿಕೊಳ್ಳುತ್ತ*
*ಕೊಳೆತು ನಾರುವ ನೆಣದಲ್ಲಿ*
*ಮೂಗು ಮುಚ್ಚಿ*
*ಬೆನ್ನು ಬಗ್ಗಿಸಿ*
*ಹಗ್ಗ ಹೊಸೆದು*
*ಪಿಸುಗುಡುವ ಬಡವರಿಗಿದು*
*ಬರಡು ಭೂಮಿ*

ಪರಂಪರೆಯನ್ನು ಕವಯಿತ್ರಿ ಕೆಸರು ಎನ್ನುತ್ತಾರೆ. ಏಕೆಂದರೆ ಪರಂಪರೆಯ ಸಂಪ್ರದಾಯದ ಹೆಸರಿನಲ್ಲಿ ಜನಸಾಮಾನ್ಯರಿಗೆ ಅಪಾರವಾದ ಅನ್ಯಾಯಗಳು ಶೋಷಣೆಗಳು ಆಗಿವೆ. ಜನಸಾಮಾನ್ಯರು ಹೊರಬರಲಾಗದ ಪರಂಪರೆಯ ಕೆಸರಿನಲ್ಲಿ ಸಿಕ್ಕಿಬಿದ್ದಿದ್ದಾರೆ ಆದರೆ ಪರಂಪರೆಯಲ್ಲಿ ಸಿಕ್ಕಿಬಿದ್ದ ಜನರಿಗೆ ಅದು ಶ್ರೇಷ್ಠ, ಪವಿತ್ರ ಎನ್ನುವ ಭಾವನೆ ಮೂಡಿಸಲಾಗಿದೆ. ಹೇಗೂ ಇದನ್ನು ಜನ ನಂಬಿದ್ದಾರೆ ಭಾವಿಸುವ ಬುದ್ಧಿವಂತ ವರ್ಗ ಮುಂದೆ ಇದೇ ಜನಸಾಮಾನ್ಯರನ್ನು ಕೀಳಾಗಿ ಕಾಣುತ್ತದೆ.

ಇವರು ಮೂಢನಂಬಿಕೆಯ ಕೂಪಕ್ಕೆ ಬಿದ್ದಿದ್ದಾರೆ, ವಿದ್ಯೆಯಿಂದ ದೂರವಾಗಿದ್ದಾರೆ, ಒಳ್ಳೆಯ ಬದುಕಿಲ್ಲ ಎನ್ನುವ ವಾಸ್ತವತೆಗಳು ಅವರನ್ನು ಸುಲಿಯುವಾಗಲೂ ಸಹ ಪರಂಪರೆಯ ಭ್ರಮೆಗಳಿಂದ ಅವರು ಇಚೆಗೆ ಬರಲಾರರು ಎನ್ನುವ ಕವಿತೆ ಪುರೋಹಿತಶಾಹಿಗಳ, ಮೇಲ್ವರ್ಗದವರು, ಶ್ರೀಮಂತರ ನೆಣ ಎಂದರೆ ಕೊಬ್ಬು, ಅಹಂಕಾರ, ದರ್ಪ ಇವುಗಳು ಕೊಳೆತು ನಾರುತ್ತಿವೆ ಇವುಗಳನ್ನು ಮೂಗು ಮುಚ್ಚಿ ಸಹಿಸಿಕೊಂಡು ಅಂದರೆ ಅನಿವಾರ್ಯವಾಗಿ ಅವುಗಳ ಜೊತೆಗೆ ಬದುಕಬೇಕಾದ ಜನರಿಗೆ ಇದು ಬರಡು ಭೂಮಿಯಾಗಿ ಕಾಣುತ್ತದೆ ಅಂದರೆ ಇಲ್ಲಿ ಸುಲಿಗೆ ಮಾಡುವವರು ಮಾಡುತ್ತಲೆ ಇದ್ದಾರೆ. ಮೋಸ ಹೋಗುವವರು ಹೋಗುತ್ತಲೆ ಇದ್ದಾರೆ ಎನ್ನುವ ಕವಿತೆ ಹಸಿರು ಭೂಮಿ ಮತ್ತು ಬರಡು ಭೂಮಿಯ ಪ್ರತಿಮೆಯ ಮೂಲಕ ತಾರತಮ್ಯದ ಸ್ತರವನ್ನು ಹೇಳುತ್ತದೆ.

ಈ ಕವನ ಸಂಕಲನದ ಹಕ್ಕಿಯ ಹರೆಯ ಕವಿತೆಯು ಇಲ್ಲಿದೆ. ಇದು ಕಾಲದ ಎರಡು ಪ್ರತಿಮೆಗಳನ್ನು ನಮ್ಮ ಮುಂದೆ ಇಡುತ್ತದೆ. ಹಕ್ಕಿಗೆ

ಒಂದು ನಿರ್ದಿಷ್ಟವಾದ ಜೀವಿತಾವಧಿ ಇದೆ. ಆ ಜೀವಿತವಾಧಿಯಲ್ಲಿ ಅದು ಅದರ ಬದುಕಿನ ನಿಸರ್ಗ ಸಹಜವಾದ ಕ್ರಿಯೆ ಮಾಡುತ್ತ ಹೋಗುತ್ತದೆ. ಒಂದು ದಿನ ಅದರ ಕಾಲ ಮುಗಿದು ಹೋಗುತ್ತದೆ. ಹರೆಯ ಪ್ರತಿಯೊಬ್ಬ ಜೀವಿಯ ಬದುಕಿನ ಪ್ರಮುಖವಾದ ಘಟ್ಟ. ಬದುಕಿನ ಪ್ರಮುಖ ಘಟನೆಗಳು ನಡೆಯುವುದು ಹರೆಯದಲ್ಲಿಯೆ. ಇವು ಹಕ್ಕಿಯ ಹರೆಯ ಎನ್ನುವುದನ್ನು ಬೇರೆ, ಬೇರೆಯಾಗಿ ನೋಡಿದರೆ ನಮಗೆ ದಕ್ಕುವ ಅರ್ಥಗಳು. ಇವೆರಡನ್ನೂ ಒಟ್ಟಾಗಿ ನೋಡಿದರೆ ನಮಗೆ ಸಿಗುವ ಪ್ರತಿಮಾತ್ಮಕತೆಯೆ ಬೇರೆ. ಇದರ ಒಟ್ಟು ಅರ್ಥ ಚೈತನ್ಯಪೂರ್ಣವಾದ ಹರೆಯ ಎನ್ನುವುದನ್ನು ಸೂಚಿಸುತ್ತದೆ.

***ಹಾರುವ ಬಾನಕ್ಕಿಗೆ***
***ಹರಯ ಬಂದಿತು***
***ಮುಗಿಲಗಲ ಬಾನೆತ್ತರ***
***ಮಡಿಲುಡುಪ ಬಿಚ್ಚುತ್ತ***
***ಸ್ವಚ್ಛಂದದಲ್ಲಿ ಅನಿಸಿಕೆಗೆ***
***ಆಹಾರ ಹುಡುಕುತ್ತಿತ್ತು.***

ಇದು ಸೂಚ್ಯಾರ್ಥದ ಕವಿತೆ. ಬಾಲ್ಯವನ್ನು ಮೀರಿ ಹರೆಯ ಬರುವುದು ಸಹಜ ಕ್ರಿಯೆ. ಇದು ಕಾಲ ಮಾಡುವ ಬದಲಾವಣೆ. ವ್ಯಕ್ತಿಯೊಬ್ಬ ಬದುಕಿನಲ್ಲಿ ನಡೆಯುವ ಅನೇಕ ಘಟನಾವಳಿಗಳಿಂದ ಅನೇಕ ವಿಭಿನ್ನ ಪ್ರವೃತ್ತಿಯ ಜನರನ್ನು ಸಂಧಿಸಬೇಕಾಗುತ್ತದೆ. ಇಲ್ಲಿ ಬಳಕೆಯಾಗಿರುವ ಎರಡು ಪ್ರತಿಮೆಗಳು ಬಹಳ ಮುಖ್ಯವಾಗುತ್ತವೆ. ಮುಗಿಲಗಲ ಮತ್ತು ಬಾನೆತ್ತರ. ಅಗಲವೆಂದರೆ ವಿಸ್ತರಿಕೊಳ್ಳುವ ವ್ಯಕ್ತಿತ್ವ. ಎತ್ತರವೆಂದರೆ ಪಡೆಯಬಹುದಾದ ಮನ್ನಣೆ.

ಮಡಿಲುಡುಪ ಬಿಚ್ಚುತ್ತ ಎಂದರೆ ಇದುವರೆಗೂ ಇದ್ದ ರೀತಿಗಳನ್ನು ಕಳಚಿಕೊಂಡು ಹೊಸತಾಗುವ ಕ್ರಿಯೆ. ಹೊಸತಾಗುವುದೆಂದರೆ ಇದುವರೆಗೂ ತನ್ನ ಅರಿವಿಗೆ ಬಂದ ಸಂಗತಿಗಗಳ ದೋಷವನ್ನು ಹುಡುಕಿ ಮುಂದೆ ಅದರ ಕುರಿತಾಗಿ ಪ್ರಜ್ಞಾಪೂರ್ವಕವಾಗಿ ಇರುವುದಾಗಿದೆ. ವಯಸ್ಸು ಮತ್ತು ಕಾಲ ಬದಲಾದಂತೆ ಅನೇಕ ಸಂಗತಿಗಳು ಆಲೋಚನೆಗಳಾಗಿ ಬದಲಾಗುತ್ತವೆ. ಈ ಆಲೋಚನೆಗಳನ್ನು ಮತ್ತಾರಿಗೋ ಹೇಳಬೇಕು. ಅವರನ್ನು ನಮ್ಮನ್ನು ಪ್ರಶಂಸಿಸಬೇಕು ಎನ್ನುವ ಆಸೆ ಹರೆಯದಲ್ಲಿ ಸಹಜವಾದದ್ದೆ ಎನ್ನುವುದನ್ನು ಕವಿತೆ ಧ್ವನಿಸುತ್ತದೆ.

***ಕಾಲಗರ್ಭದಲಿ ಹುದುಗಿದ***
***ಬೆಳಕಿನ ಚುಕ್ಕೆಗಳನ್ನು***
***ಹೆಕ್ಕತೊಡಗಿತು***
***ಹೆಕ್ಕಿದ್ದು ಹತ್ತಾರು, ದಕ್ಕಿದ್ದು ಒಂದು***
***ಸ್ವಂತದ್ದು ಒಳಗಿನ ದನಿಯದು***

ಕಾಲವೇ ನಮ್ಮ ಮುಂದೆ ಅನೇಕ ಆಯ್ಕೆಗಳನ್ನು ಇಡುತ್ತದೆ. ಅದರಲ್ಲಿ ನಮ್ಮ ಯಾವುದೆನ್ನುವುದು ಮುಖ್ಯ. ಇಲ್ಲಿ ಹರೆಯದ ಆಯ್ಕೆ ಎನ್ನುವುದು ಕೆಲವು ಸಂಗತಿಗಳನ್ನು ಒಳಗೊಂಡಿದೆ. ಅದು ವಿದ್ಯೆಯಿರಬಹುದು, ಪ್ರೇಮವಿರಬಹುದು, ಉದ್ಯೋಗವಿರಬಹುದು. ಇವುಗಳು ಕೂಡ ಅನೇಕ ಆಯ್ಕೆಗಳನ್ನು ನಮ್ಮ ಮುಂದೆ ಇಡುತ್ತವೆ. ಹರೆಯ ಅನೇಕ ಗೊಂದಲಗಳ ಸಂದರ್ಭವೂ ಹೌದು. ತನ್ನ ಆಯ್ಕೆಯ ಕುರಿತಾಗಿ ಇತರರ ಅಭಿಪ್ರಾಯವೇನೂ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ. ಎಷ್ಟೇ ಆಯ್ಕೆಗಳಿದ್ದರೂ ಒಂದನ್ನು ಆರಿಸಿಕೊಳ್ಳಬೇಕು. ಆ ಒಂದನ್ನು ಆರಿಸಿಕೊಳ್ಳಲು ಕಾರಣವೇನು ಇದಕ್ಕೆ ಸರಿಯಾದ ಉತ್ತರ ಸಿಗುವುದಿಲ್ಲ.

***ಅದಕ್ಕೆ ಭಾವನೆಗಳ ವರ್ಣರಂಜಿತ***
***ಪುಕ್ಕಗಳ ಹಚ್ಚಿ ಸೊಗಸಿಂದ ಬೀಗುವ ವೇಳೆಗೆ***
***ಗಾಳಿ ಮಂದವಾಗಿ***
***ಚಲನೆ ನಿಂತು***
***ಮನಸಿನ ಗರಿ ಮುದುಡಿ***
***ಆ ಹರೆಯ***
***ಮಾನಸಿಕ ಸಾವು ಕಂಡಿತು.***

ಹರೆಯದಲ್ಲಿ ಭಾವನೆಗಳಿಗೆ ಹಲವು ಬಣ್ಣಗಳಿರುತ್ತವೆ. ಅವುಗಳ ರಮ್ಯ ಭಾವಗಳು ಮನಸಿಗೆ ಬಂದು ಹೋಗುತ್ತದೆ. ಬದುಕಿನ ಹಲವು ಕನಸುಗಳು ಇಲ್ಲಿ ಜೀವ ತಳೆಯುತ್ತವೆ. ಇವೆಲ್ಲವೂ ನಡೆಯುವ ಕಾಲವಧಿ ಕಡಿಮೆ ಎಂದೆ ಹೇಳಬೇಕು. ಬದುಕಿನ ಸಂಭ್ರಮದಲ್ಲಿ ಇರುವಾಗಲೆ ಹರೆಯ ಮುಗಿದು ಹೋಗಿ ಮಧ್ಯವಯಸ್ಸು ಬಂದಿರುತ್ತದೆ. ಇದನ್ನು ಕವಯಿತ್ರಿ ಹರೆಯದ ಮಾನಸಿಕ ಸಾವು ಎನ್ನುತ್ತಾರೆ. ಹರೆಯ ದೇಹದ ಚಹರೆಗಳ ಮೂಲಕ ಕಾಣುವ ಸಂಗತಿಯಾಗಿದ್ದರೂ ಸಹ ಆ ಹೊತ್ತಿನ ಮನಸ್ಸು ಅದರ ಭಾಗವಾಗುತ್ತದೆ. ಹರೆಯದ ಬಿಸಿತನವನ್ನು ಒಪ್ಪಿಕೊಂಡಂತೆ ಅದರ ಮುಂದಿನ ಹಂತವನ್ನು ಕೂಡ ಸಹಜವಾಗಿ ಒಪ್ಪಿಕೊಳ್ಳಬೇಕು. ಈ ಕವಿತೆಯಲ್ಲಿ ಕಾಲದ ಪ್ರತಿಮೆಗಳಿವೆ. ಹಕ್ಕಿಯ ಹರೆಯ ಎನ್ನುವುದು ಕವಿತೆ ಮುಗಿದಾಗ ಇನ್ನೊಂದು ಅರ್ಥವನ್ನು ನೀಡುತ್ತದೆ. ಹಕ್ಕಿಗಳು ಒಂದು ಕಡೆ ಕೂರುವುದಿಲ್ಲ. ಒಂದು ಕಡೆ ಕೂತ ಮರುಕ್ಷಣದಲ್ಲಿಯೆ ಎತ್ತಲೊ ಹಾರಿ ಹೋಗುತ್ತವೆ. ಯೌವ್ವನವೂ ಕೂಡ ನೋಡು ನೋಡುತ್ತಿದ್ದಂತೆ ಜಾರಿ ಹೋಗಿ ಬಿಡುತ್ತದೆ ಎನ್ನುವುದು ಈ ಕವಿತೆ ಧ್ವನಿಸುತ್ತದೆ. ಪದ್ಮಾಶೇಖರ್ ಅವರ ಪ್ರಮುಖ ಕವಿತೆ ಇದಾಗಿದೆ.

ಆಧುನಿಕ ಕನ್ನಡ ಮಹಿಳಾ ಕಾವ್ಯವು ಪುರಾಣದ ಶ್ರೇಷ್ಠತೆಯನ್ನು ಯಾವಾಗಲೂ ಪ್ರಶ್ನಿಸುತ್ತ ಬಂದಿದೆ. ಪುರಾಣವನ್ನು ಪ್ರಶ್ನಿಸುವುದೆಂದರೆ ಅದು ಪುರುಷ ಸಮಾಜವನ್ನು ಪ್ರಶ್ನಿಸುವುದೇ ಆಗಿದೆ. ಇದೇ ನೆಲೆಯಲ್ಲಿ ಪದ್ಮಾಶೇಖರ್ ಅವರು ಕೂಡ ಸೀತೆ ಎನ್ನುವ ಕವಿತೆಯನ್ನು ಬರೆಯುತ್ತಾರೆ.

***ಸೀತೆ***
***ನಾನು ಸೀತೆ***
***ಪಂಚ ಪತಿವ್ರತೆಯರಲ್ಲಿ ಪ್ರಖ್ಯಾತಳು!***
***ಇದಕ್ಕಾಗಿ ನಾನು ತೆತ್ತದ್ದು ದುಬಾರಿ ಬೆಲೆ ಗೆಳತಿ***

ರಾಮಾಯಣ ನಡೆದು ಎಷ್ಟೊ ಕಾಲದ ನಂತರ ಸೀತೆ ಪತಿವ್ರತೆಯ ಸಾಲಿಗೆ ಸೇರಿದಳು. ಪತಿವ್ರತೆ ಎನ್ನುವುದರಲ್ಲಿಯೂ ಕೂಡ ಪತಿ ಎನ್ನುವ ಪುರುಷ ರೂಪವೇ ಇದೆಯೇ ಹೊರತು ಅದನ್ನು ಪಾಲಿಸಿದವಳ ಅಸ್ತಿತ್ವ ಮುಖ್ಯವಾಗಿ ಕಾಣುವುದಿಲ್ಲ. ಪಂಚಪತಿವ್ರತೆಯರಲ್ಲಿ ಪ್ರಖ್ಯಾತಳು! ಎನ್ನುವಲ್ಲಿ ಇರುವ ಆಶ್ಚರ್ಯಸೂಚಕ ಚಿನ್ನೆಯು ಕೂಡ ಒಂದು ಭಾವವನ್ನು ಪ್ರಕಟಿಸುತ್ತದೆ. ಅದು ಪಡಬಾರದ ಕಷ್ಟಗಳನ್ನು ಅನುಭವಿಸಿ ನಂತರ ಬಂದ ಪ್ರಖ್ಯಾತಿ ಒಂದು ರೀತಿಯ ವ್ಯಂಗ್ಯವೆಂಬುದನ್ನು ಇದು ಸೂಚಿಸುತ್ತದೆ.

***ನನ್ನೀ ಗೌರವದ ಸೆರಗ ನಕ್ಕಿಗಳ ಒಳಗೆ***
***ಉಂಡ ಹಾಲಾಹಲ***
***ಕರಗಿದ ಕಾವ ಹೇಗೆ ಹೇಳಲಿ***

ತನ್ನ ತಂದೆಯ, ಗಂಡನ, ಮಾವನ ಗೌರವ ಉಳಿಸಲು ಸೀತೆ ಅನೇಕ ಕಷ್ಟ ಕೋಟಲೆಗಳನ್ನು ಎದುರಿಸಬೇಕಾಯಿತು. ಅದರ ಪಾಲನ್ನು ಪುರುಷ ಸಮಾಜ ಪಡೆದು ಸೀತೆಯು ಕಷ್ಟವನ್ನು ಅನುಭವಿಸಿದಳು ಎಂದಿತ್ತಷ್ಟೆ. ಏಕೆಂದರೆ ಸೀತೆಯ ದೃಷ್ಟಿಯಿಂದ ರಾಮಾಯಣವನ್ನು ಗ್ರಹಿಸುವ ಶಕ್ತಿ ಪುರುಷಸಮಾಜಕ್ಕೆ ಇಲ್ಲ.

***ಕೇಳು***
***ಹೆಣ್ತನದ ಅಭಿಶಾಪ ಹೊತ್ತು***
***ರಾಮನ ಪೌರುಷಕೆ ಸಂಕೇತವಾಗಿ ನನ್ನ ಪ್ರವೇಶ***
***ತುಂಬಿ ನಿಂತ ಯೌವನ ಸ್ವಪ್ನಗಳು***
***ಮೆಟ್ಟಿಲಾಗಿ ಪೇರಿಸಿಟ್ಟ ಹಂಬಲ ಆಕಾಂಕ್ಷೆಗಳು***
***ದಂತಗೋಪುರದಲ್ಲಿ ಮುಲುಗುಟ್ಟಿದವು***

ಹೆಣ್ತನವನ್ನು ಒಂದು ರೀತಿಯ ಶಾಪವೆಂದು ಭಾವಿಸುವುದು ಬಹುತೇಕ ಮಹಿಳಾ ಕಾವ್ಯಗಳ ಧೋರಣೆ. ಇದಕ್ಕೆ ಕಾರಣ ಅದು ಸೀತೆ ಅನುಭವಿಸಿದ ನೋವಿನ ವಿನ್ಯಾಸಗಳು ಬೇರೆಯಾಗಿದ್ದರೂ ಹೆಣ್ಣಿನ ವಿಷಯದಲ್ಲಿ ಹಿಂಸೆಯನ್ನು ಸೃಷ್ಟಿ ಮಾಡುತ್ತಿರುವ ಮನಸುಗಳು ಬದಲಾಗಿಲ್ಲ. ಬಿಲ್ಲು ಮುರಿದಾಗಲೂ ರಾಮನ ಸೀತೆಯನ್ನು ಗೆದ್ದ ಎನ್ನುವ ಮೆಚ್ಚುಗೆ, ರಾವಣನನ್ನು ಕೊಂದಾಗಲೂ ಸೀತೆಯನ್ನು ಗೆದ್ದ ಎನ್ನುವ ಹರ್ಷೋದ್ಘಾರ ಇವು ಸಿಗುವುದು ರಾಮನಿಗೆ,

ಸೀತೆಗಲ್ಲ. ಸೀತೆಯ ಆಕ್ಷಾಂಕೆಯನ್ನು ಯಾರೂ ಕೇಳಲೆ ಇಲ್ಲ.

***ಬಂದವ***
***ಬೆಂಕಿಗೆ ಹಾಕಿ***
***ನನ್ನ ಪಾತಿವ್ರತ್ಯವ ಕೊಲೆ ಮಾಡಿದ***
***ಕ್ಷಮೆಯಾ ಧರಿತ್ರಿಯಲ್ಲವೆ ನಾನು!***

ರಾಮ ಸೀತೆಯನ್ನು ಅಗ್ನಿಪರೀಕ್ಷೆಗೆ ಒಳಪಡಿಸಿದ. ಇಲ್ಲಿ ಪವಿತ್ರಳು ಎಂದು ಲೋಕಕ್ಕೆ ಸಾರಬೇಕಿತ್ತು, ತನ್ನ ಹೆಂಡತಿ ನಡತೆಗೆಟ್ಟಿಲ್ಲ ಎಂದು ತೋರಿಸಬೇಕಿತ್ತು. ಇಲ್ಲೂ ವಿಜಯಯಾದದ್ದು ಪುರುಷನೆ ಮತ್ತು ಆತನ ಅಹಂ. ಸೀತೆಯ ಕುರಿತಾಗಿ ಮಾತನಾಡಿದವನು ಒಬ್ಬ ಅಗಸ ಅವನು ಗಂಡು. ಸೀತೆಯ ಜೀವನ ಗಂಡುಲೋಕದ ನಡುವೆ ನಲುಗುತ್ತಿರುವುದನ್ನು ಈ ಕವಿತೆ ಧ್ವನಿಸುತ್ತದೆ.

***ಅಗಸನ ಮಾತಿಗೆ***
***ಮೂರು ಲೋಕದ ಗಂಡ***
***ಧರ್ಮಕೆ ಎನ್ನನು ಮಾರಿ***
***ತೂರಿ ಬಿಟ್ಟ***

ರಾಮನ ಕುರಿತ ಸಂಗತಿಗಳು ಜನಜನಿತ. ಸೀತೆಯ ವಿಷಯದಲ್ಲಿ ರಾಮ ನಡೆದುಕೊಂಡಿದ್ದು ಸರಿಯೇ ಎಂದು ಕೇಳಿದರೆ ಲೋಕ ಮೌನವಾಗುತ್ತದೆ. ರಾಮನಿಗೆ ಗಂಡನಾಗುವ ಧರ್ಮಕ್ಕಿಂತ ಗಂಡಾಗುವ ಧರ್ಮವೆ ಮುಖ್ಯವಾಗುತ್ತದೆ.

***ಕೊನೆಗೂ ದಕ್ಕಲಿಲ್ಲ ನನಗೆ***
***ಮನ ಬಯಸಿದ್ದ ರಾಮ***
***ಕೈಗೆ ಕೈ ಮಿಲಾಯಿಸದೆ***
***ವಿಫಲಯಾತ್ರೆಯ ತಡೆದು***
***ಏಕ್ಕಸರವಾಗಿ***
***ಸೀತೆಯಾದೆ***
***ಸತ್ತು ಸುಶೀಲೆಯಾಗುಳಿದೆ***

ಕನ್ನಡ ಸಾಹಿತ್ಯದ ಮಹಿಳಾ ಕಾವ್ಯದ ಧ್ವನಿ ಇಲ್ಲಿದೆ. ಹೆಣ್ಣು ಬಯಸುವ ಗಂಡು ವಾಸ್ತವದಲ್ಲಿ ಇರುವನೆ ಎನ್ನುವ ಪ್ರಶ್ನೆ ಇಲ್ಲಿಯದು. ರಾಮ ಲೋಕವಿಖ್ಯಾತನಾಗಲು ಏನೇನೊ ಮಾಡಿದ ಸೀತೆಗನಿಸುವುದು ನನ್ನ ಗಂಡನಾಗಿ ಉಳಿದಿದ್ದರೆ ಸಾಕಿತ್ತು. ಅದು ಯಾವುದು ಕೈಗೂಡಲಿಲ್ಲ. ಕೊನೆಗೆ ಸತ್ತು ಹೋದೆ ಆಗ ಲೋಕ ನನ್ನನ್ನು ಹೊಗಳಿತು ಎನ್ನುವ ವ್ಯಂಗ್ಯವು ಇದರಲ್ಲಿ ಇದೆ. ಸ್ತ್ರೀ ಪ್ರತಿಮೆಗಳ ಪುರುಷ ಲೋಕದ ಆಷಾಢಭೂತಿತನವನ್ನು ಕವಿಯಿತ್ರಿ ಪ್ರಶ್ನಿಸಿದ್ದಾರೆ ಎನ್ನುವುದು ಇಲ್ಲಿ ಭಾವವಾಗಿದೆ.

**ಆಕರ ಗ್ರಂಥ**


- ಪದ್ಮಾ ಶೇಖರ್. ಹಕ್ಕಿಯ ಹರೆಯ ಕಾವ್ಯ.